

## ಪರ್ವತಗಳ ಮೇಲೆ ಬೆಳಕಿನ ಲೀಲೆ

ಅದ್ಭುತ ಭೂದೃಶ್ಯಗಳನ್ನು ಹೊಂದಿರುವ ನ್ಯೂಜಿಲೆಂಡ್, ಆಸ್ಟ್ರೋಫೋಟೊಗ್ರಫರ್‌ಗಳ ಪಾಲಿನ ಪುಣ್ಯಕ್ಷೇತ್ರ. 'ಗ್ಯಾಲಾಕ್ಟಿಕ್ ಕಿವಿ' ಎಂಬ ಹೆಸರಿನ ತಮ್ಮ ಛಾಯಾಚಿತ್ರಕ್ಕೆ ಛಾಯಾಗ್ರಾಹಕ ಇವಾನ್ ಮ್ಯಾಕೆ ಆರಿಸಿಕೊಂಡಿದ್ದು ಕೂಡ ಇಲ್ಲಿನ ಮೌಂಟ್ ಟಾರಾನಕಿಯನ್ನು.

'ಬೆಟ್ಟದ ಅಂಚಿಗೆ ಸರಿಯಾಗಿ ಮಿಲ್ಕಿವೇ ಕಾಣುವಂತೆ ಚಿತ್ರ ಕ್ಲಿಕ್ಕಿಸಿದ್ದೆ. ಆದರೆ ಈ ಚಿತ್ರವನ್ನು ಇನ್ನಷ್ಟು ಸೊಗಸಾಗಿ ತೆಗೆಯಬಹುದು ಎಂದು ಅನಿಸಿತ್ತು. ಹೀಗಾಗಿ ಮತ್ತೆ ಬಂದು ಇನ್ನೊಂದು ಚಿತ್ರ ತೆಗೆದೆ. ಸ್ವಷ್ಟವಾದ ಆಕಾಶದಲ್ಲಿ ನಕ್ಷತ್ರ ಪುಂಜ ಮಿಲ್ಕಿ ವೇ ಅದ್ಭುತ ಸೌಂದರ್ಯ ತೆರೆದಿಟ್ಟಿತ್ತು. ಬೋನಸ್ ಎಂಬಂತೆ ಉಲ್ಕೆಗಳೂ ಈ ಚಿತ್ರಕ್ಕೆ ಜೊತೆಯಾದವು' ಎನ್ನುತ್ತಾರೆ ಛಾಯಾಗ್ರಾಹಕ ಇವಾನ್.



## ಕಾಲ್ಪನಿಕ ಲೋಕ: 'ನೂಕಾಂಪಾ ರಿಫ್ಲೆಕ್ಷನ್ಸ್'

ದಕ್ಷಿಣ ಆಸ್ಟ್ರೇಲಿಯಾದ ಪ್ರಸಿದ್ಧ ನದಿ ಬೋನೆ (ಇದಕ್ಕೆ ನೂಕಾಂಪಾ ಎಂದೂ ಕರೆಯುತ್ತಾರೆ.) ಮೇಲೆ ಹರಡಿಕೊಂಡ ಮಿಲ್ಕಿವೇ ಸೆರೆಹಿಡಿದಿರುವುದು ಛಾಯಾಗ್ರಾಹಕ ವಿಲ್ ಗಾಡ್ವಾರ್ಡ್. ಚಿತ್ರಕ್ಕೆ ಅವರು ಕೊಟ್ಟ ಹೆಸರು 'ನೂಕಾಂಪಾ ರಿಫ್ಲೆಕ್ಷನ್ಸ್'.

'ಈ ನದಿಯ ಮೇಲೆ ಮಿಲ್ಕಿ ವೇ ಚಾಚಿಕೊಳ್ಳುವುದನ್ನು ಸೆರೆಹಿಡಿಯಬೇಕೆಂದು ಎಷ್ಟು ಕಾಲ ಕಾದಿದ್ದೆ ಗೊತ್ತೇ? ಕೊನೆಗೂ ಅದು ಸಾಕಾರಗೊಂಡಿತು. ನಿಶ್ಚಲ ರಾತ್ರಿ ಹಾಗೂ ಸೂಕ್ತ ಹವಾಮಾನ ಇದನ್ನು ಸಾಧ್ಯವಾಗಿಸಿತು. ಹಗಲಿನಲ್ಲಿ ಈ ಸ್ಥಳವನ್ನು ಪೂರ್ವ ಶೋಧ ಮಾಡಿ ನಾನು ಬುದ್ಧಿವಂತ ಕೆಲಸ ಮಾಡಿದೆ. ಮಧ್ಯ ರಾತ್ರಿ ನಂತರ ಅದೇ ಸ್ಥಳಕ್ಕೆ ಹಿಂದಿರುಗಲು ಈ ಶೋಧನೆ ನನಗೆ ತುಂಬಾ ಸಹಾಯ ಮಾಡಿತು. ನಿಶ್ಚಲ ನೀರಿನಲ್ಲಿ ನಕ್ಷತ್ರಗಳ ಅದ್ಭುತ ಪ್ರತಿಬಿಂಬ ಮೂಡಿಸುವ, ಇದರಲ್ಲಿ ಮಿಲ್ಕಿ ವೇ ನೋಡುವ ಅನುಭವವೇ ಸುಂದರ. ಕೊರಡಾದ ಮರಗಳು ಈ ಚಿತ್ರಕ್ಕೆ ಇನ್ನಷ್ಟು ಆಳ ತಂದುಕೊಟ್ಟವು' ಎಂದು ವಿವರಿಸುತ್ತಾರೆ ವಿಲ್.





## ಕಣಿವೆ ತೆರೆದಿಟ್ಟ ನೀಲಾಕಾಶದ ಚೆಲುವು

'ವಿಂಚಿನಾ ಬ್ಲೂ ಸ್ಕೈ' ಎಂಬ ಈ ಚಿತ್ರದ ಛಾಯಾಗ್ರಾಹಕ ಗೊಂಜಾಲೊ ಜೇವಿಯರ್ ಸಾಂಟೈಲ್, ಅರ್ಜೆಂಟೀನಾದವರು. ಆ ದೇಶದ ಲಾ ರಿಯೋಜಾ ಎಂಬಲ್ಲಿ ಈ ಚಿತ್ರ ಸೆರೆಹಿಡಿಯಲಾಗಿದೆ. ಈ ಚಿತ್ರ ಕ್ಲಿಕ್ಕಿಸಲು ಅವರು ಐದು ದಿನಗಳ ಕಾಲ ಕಾದಿದ್ದರಂತೆ! 'ಬ್ರಾವಾ ಎಂಬ ಪರ್ವತವನ್ನು ತಲುಪಲು 4,600 ಮೀಟರ್ ಎತ್ತರ ಏರಬೇಕಾಯಿತು. ಗುಲಾಬಿ ಬಣ್ಣದ ಫ್ಲೆಮಿಂಗೊಗಳಿಂದ ಆವೃತಗೊಂಡ ಆ ಜಾಗ ನೋಡಲು ಬಲು ಸೊಗಸು. ಅಲ್ಲಿನ ಅತ್ಯದ್ಭುತ ಸ್ಥಳವೆಂದರೆ ಕೊರೊನ ಡೆಲ್ ಇನ್‌ಕಾ. ಪರ್ವತ ಹತ್ತಲು ಅವಶ್ಯವಿರುವ ಆಮ್ಲಜನಕ ಪಡೆದುಕೊಳ್ಳಲು ಜನ ಅಲ್ಲಿಗೆ ಬರುತ್ತಾರೆ. ಫೋಟೊ ತೆಗೆಯಲು ಬಂದ ಮೊದಲ ದಿನ ಇಲ್ಲಿ ಝೀರೋ ಲೈಟ್ ಪೊಲ್ಯೂಷನ್ ಇದ್ದ ಕಾರಣ ಚಿತ್ರಗಳು ಚೆನ್ನಾಗಿ ಬರಲಿಲ್ಲ. ಮಾರನೇ ದಿ 'ಬ್ಲೂ ಹವರ್'ನಲ್ಲಿ ಈ ಮಿಲ್ಕಿ ವೇ ಚಿತ್ರ ಸೆರೆಹಿಡಿದೆ' ಎಂದು ತಮ್ಮ ಅನುಭವದ ಕಥೆ ಹೇಳಿಕೊಂಡಿದ್ದಾರೆ ಗೊಂಜಾಲೊ.